# ಯುದ್ಧದ ಮರುದಿನ

ಯುದ್ಧದ ಭೀಕರತೆಯನ್ನು ಎದೆ ನಡುಗುವ ಹಾಗೆ ನೇರವಾಗಿ ಯುದ್ಧಭೂಮಿಯಲ್ಲಿ ಹರಿಯುತ್ತಿರುವ ನೆತ್ತರಲ್ಲೇ ಕಾಲೂರಿಕೊಂಡು ಚಿತ್ರರಿಸಿದ ಕವಿಗಳಿದ್ದಾರೆ. ಅದೊಂದು ಭೂಮಿಯ ಮಸಣವೆಂದೂ ಕರೆದ ಕವಿಗಳಿದ್ದಾರೆ. ಅಂತಿಮವಾಗಿ ಯುದ್ಧದಲ್ಲಿ ಜಯವೂ ದೊರಕಿತು. ಸೋತವರು ರಾಜ್ಯಾಧಿಕಾರಗಳನ್ನು ಕಳೆದುಕೊಂಡರು. ಸೋತವರ ರಾಜ್ಯದ ಪ್ರತಿ ಕುಟುಂಬದಲ್ಲೂ ವಿಧವೆಯರು, ಮಕ್ಕಳನ್ನು ಕಳೆದುಕೊಂಡ ತಂದೆ ತಾಯಂದಿರು! ಗೆದ್ದವರ ರಾಜ್ಯದಲ್ಲೂ ಇದೇ ದೃಶ್ಯಗಳು ಮರುಕಳಿಸುತ್ತವೆ. ಎತ್ತ ನೋಡಿದರೂ ದೀಪ ಆರಿದ ಮನೆಗಳೆ! ಇದು ಎಲ್ಲ ಕಾಲದ ಚರಿತ್ರೆಯಲ್ಲೂ ಹಾಗೂ ವರ್ತಮಾನದಲ್ಲೂ ಕಂಡುಬರುವ ಯುದ್ಧದ ಫಲಿತಾಂಶಗಳು. ಆದ್ದರಿಂದಲೇ ಎಲ್ಲ ಕಾಲದ ಆಳರಸರಿಗೂ ರೈತರಿಗಿಂತ ಯೋಧರ ಮೇಲೆಯೇ ಹೆಚ್ಚು ಒಲವು. ಆದರೆ ಯುದ್ಧ ಮುಗಿದ ಮರುದಿನ ರಣರಂಗವನ್ನು ಕಂಡವರಿಗೆ, ಯುದ್ಧಕ್ಕಿಂತ ಘನಘೋರವಾದ ದೃಶ್ಯಗಳನ್ನು ಕಂಡು ಮರುಗುವವರು ಚರಿತ್ರೆಯಲ್ಲಿ ಅತಿ ವಿರಳ! ಆದ್ದರಿಂದ ಯುದ್ಧ ಆಳರಸರಿಗೆ ಅಲಂಕಾರ; ಜನಸಾಮಾನ್ಯರಿಗೆ ಶ್ಮಶಾನದ ಹಾದಿ

ಆದರೆ ವಿಪರ್ಯಾಸವೆಂದರೆ, ಅರಸನ ಅರಮನೆಯವರೆಗೂ ಬರುವ ಸಾವನ್ನು ತಡೆಯಲು, ಅರಮನೆಯ ಗಸ್ತಿನವರಿಗೂ ಸಾಧ್ಯವಾಗುವುದಿಲ್ಲ! ಇದನ್ನು ಯುದ್ಧ ಮತ್ತು ಅರಾಜಕತೆಯನ್ನು ಬಯಸುವ ಎಲ್ಲ ರಾಜರುಗಳೂ ಮತ್ತು ಸರ್ವಾಧಿಕಾರಿಗಳೂ ಮರೆತಿರುತ್ತಾರೆ! ಕೊನೆಗೆ ರಾಜನೂ ಯುದ್ಧದಲ್ಲಿ ಸತ್ತಾಗ ಸೇವಕಿಯೊಬ್ಬಳು ರಾಣಿಗೆ 'ಬಂದೆ ಬರುವನು ಪತಿಯು, ಇನ್ನೇನು ಬಂದನು, ಎಷ್ಟು ಓಲೈಸಿದರು ನಿಲ್ಲದ ಕಂಬನಿ. ಅರಸಿಯ ಚಿಂತೆಗೆ ಕೊನೆಯಿಲ್ಲ' ಎಂದು ವಿಷಾದದಿಂದ ಹಾಡುತ್ತಾಳೆ.

ಒಂದು ಸಣ್ಣ ಕಳಿಂಗ ರಾಜ್ಯವನ್ನು ಆಳುತ್ತಿದ್ದ ರಾಜನೊಬ್ಬನ ಮೇಲೆ ದಂಡೆತ್ತಿ ಹೋಗಿದ್ದ ಅಶೋಕ, ಅಸಂಖ್ಯಾತ ಯೋಧರನ್ನು ಕೊಂದ. ಸಹಸ್ರಾರು ಸಂಖ್ಯೆಯ ಯೋಧರನ್ನು ಸೆರೆಯಾಳಾಗಿಸಿಕೊಂಡ. ವಿಜಯಿಯಾದ ಮರುದಿನ ಅಶೋಕ ಯುದ್ಧಭೂಮಿಯಲ್ಲಿ ನಡೆದುಬರುತ್ತಿದ್ದಾಗ ನೋಡಿದ ಕರುಳಿರಿಯುವ ದೃಶ್ಯಗಳು ಅವನನ್ನು ಪರಿವರ್ತಿಸಿದವು. 'ಹಿಂಸೆ, ಹತ್ಯಾಕಾಂಡ ಮತ್ತು ಪ್ರೀತಿಪಾತ್ರರಿಂದ ದೂರವಾದ ಬಂದಿಗಳು' ಇವನ್ನೆಲ್ಲಾ ನೋಡಿದ ಅವನ ಮನಸ್ಸಿನಲ್ಲಿ ಬಿರುಗಾಳಿಯೇ ಎದ್ದಿತು. ಯೋಧರ ಭೀಕರ ಸಾವುಗಳನ್ನು, ಅವರಿಗಾಗಿ ರೋದಿಸುತ್ತಿದ್ದ ಅವರ ಬಂಧು–ಬಳಗದವರನ್ನು ನೋಡಿ ಅವನ ಮನಸ್ಸು ಮಂಜುಗಡ್ಡೆಯಂತೆ ಕರಗಿತು. ಅವನ ಮನಸ್ಸಿನೊಳಗೆ ಕರುಣೆಯ ಕಡಲಿನ ಅಲೆಗಳು ನಿಧಾನವಾಗಿ ಸದ್ದುಮಾಡತೊಡಗಿದವು. ಅರಮನೆಗೆ ಬಂದ ಅಶೋಕ ಕೂಡಲೇ ತನ್ನ ರಾಜ್ಯದಲ್ಲಿದ್ದ ಬಂದಿಖಾನೆಗಳ ಬಾಗಿಲುಗಳನ್ನೆಲ್ಲಾ ಮುಕ್ತವಾಗಿ ತೆರೆದ. ಅನಂತರ ಅವನು ಮಹಾಕರುಣೆಯ ಬೌದ್ಧಧರ್ಮವನ್ನು ಸ್ವೀಕರಿಸಿ ಹಿಂಸೆಯನ್ನು ತ್ಯಜಿಸಿದ. ಒಂದು ಯುದ್ಧ ರಾಜನೊಬ್ಬನನ್ನು ಈ ರೀತಿಯಾಗಿ ಪರಿವರ್ತನೆಗೊಳಿಸಿದ ಉದಾಹರಣೆ ಚರಿತ್ರೆಯಲ್ಲಿ ಅಪರೂಪ.

ಕುವೆಂಪು ಅವರ 'ಶ್ಮಶಾನ ಕುರುಕ್ಷೇತ್ರಂ' ಕೃತಿಯಂತೂ ಮಹಾಭಾರತದ ಯುದ್ಧೋತ್ತರ ದಿನಗಳ ವಿದ್ರಾವಕ ಕಥನ. ಯುದ್ಧ ಮತ್ತು ಅದು ತಂದೊಡ್ಡುವ ಸಂಕಟವನ್ನು, ಆಧಾರ ತಪ್ಪಿದ ಕುಟುಂಬಗಳ ದಾರುಣತೆಯನ್ನು ಎದೆಗೆ ನಾಟುವಂತೆ ಹೇಳುವ ನಾಟಕ. ನ್ಯಾಯವೆಂಬ ಯುದ್ಧವೇ ಭೂಮಿಯ ಮೇಲಿಲ್ಲ! ಎಂದು ಕುವೆಂಪು ಹೇಳುತ್ತಾರೆ! ಕುರುಕ್ಷೇತ್ರ ಯುದ್ಧ ಅಂತ್ಯ ಕಂಡಾಗ, ತನ್ನ ಮಗನೊಡನೆ ಗಂಡನ ಶವವನ್ನು ಹುಡುಕುತ್ತಾ ಯುದ್ಧಭೂಮಿಗೆ ಬರುವ ಮಹಿಳೆ, ಹೆತ್ತ ಮಗನನ್ನು ಹುಡುಕುತ್ತಾ ಬರುವ ಮುದುಕಿ– ಎಷ್ಟು ಹುಡುಕಿದರೂ ಅವರ ಗಂಡ ಹಾಗೂ ಮಗನ ಶವ ಯುದ್ಧಭೂಮಿಯಲ್ಲಿ ಸಿಗುವುದೇ ಇಲ್ಲ! ಬರೀ ಹೆಣಗಳ ರಾಶಿ. ಇವರೆಲ್ಲರ ರೋದಿಸುವ ಕಣ್ಣುಗಳ ಮೂಲಕ ಕುವೆಂಪು ಯುದ್ಧದ ವಿಪತ್ತನ್ನು ತೋರಿಸುತ್ತಾರೆ. ನತದೃಷ್ಟ ಕಣ್ಣುಗಳಿಗೆ ಯುದ್ಧಭೂಮಿಯೆನ್ನುವುದು 'ಶವಗಳುಗ್ರಾಣ'ವಾಗಿ ಗೋಚರವಾಗುತ್ತದೆ.

ಇಂದು ನಮ್ಮ ಕಣ್ಣೆದುರೇ ನಡೆಯುತ್ತಿರುವ ಯುದ್ಧಗಳ ಕ್ರೌರ್ಯವನ್ನು ನೋಡಿದರೆ ಇವೆಲ್ಲವೂ ಸತ್ಯವೇ. ಮಲಗಿದ್ದ ಹಸುಗೂಸುಗಳ ಮೇಲೆ ಬಾಂಬುಗಳನ್ನು ಎಸೆಯುವುದು, ಪ್ರಾರ್ಥನಾ ಮಂದಿರಗಳನ್ನು ಟ್ಯಾಂಕರ್‌ಗಳಿಂದ ಧ್ವಂಸ ಮಾಡುವುದು, ರೋಗಿಗಳು, ಹಿರಿಯ ನಾಗರಿಕರು ಇರುವ ಆಸ್ಪತ್ರೆಗಳ ಮೇಲೆ ಎಸಗುವ ದಾಳಿ, ತಿನ್ನುವ ಅನ್ನ, ಔಷಧ, ಕುಡಿಯುವ ನೀರಿಗೆ ವಿಷ ಬೆರೆಸುವುದು. ಇವೆಲ್ಲವೂ ಯುದ್ಧದ ಹೆಸರಿನಲ್ಲಿ ನಡೆಸುತ್ತಿರುವ ಮಾನವೀಯತೆಯ ಹತ್ಯಾಕಾಂಡವಲ್ಲದೆ ಬೇರೇನೂ ಅಲ್ಲ! ಇಂತಹ ಬರ್ಬರ ಕೃತ್ಯಗಳನ್ನೆಲ್ಲಾ ಸಹಿಸಿಕೊಳ್ಳುವುದು ಮನುಕುಲಕ್ಕೆ ಕಳಂಕ! 'ಭಗವಂತನ ಅನುಗ್ರಹಕ್ಕಿಂತಲೂ ಮಿಗಿಲಾದುದು ಕೋಮಲವಾದ ಕರುಣೆಯೊಂದೆ' ಎಂದ ಕುವೆಂಪು ಅವರ ಹೇಳಿಕೆಯನ್ನು ಮಕ್ಕಳು, ಮಹಿಳೆಯರು ಹಾಗೂ ಮುಪ್ಪಾದವರ ಮೇಲೆ ಆಯುಧಗಳನ್ನು ಎತ್ತುವವರ ಖಡ್ಗದ ಮೇಲೆ ಕೆತ್ತಿಸಬೇಕು ಅನಿಸುತ್ತದೆ. ಹಾಲುಗಲ್ಲದ ಕೂಸುಗಳನ್ನು ಕೊಲ್ಲುವ ಯುದ್ಧವನ್ನು ನೋಡಿ ಜಪಾನ್ ಕಲಾವಿದನೊಬ್ಬ ಉಸುರಿದ 'ಅದು ಸುಟ್ಟು ಉದುರಿತು / ಬೀಳುವಾಗ ಹೂವುಗಳು ಎಷ್ಟು ಶಾಂತ'

ತಮಿಳಿನ ಸಂಗಂ ಸಾಹಿತ್ಯದಲ್ಲಿ ಕಂಡುಬರುವ ಕವಿತೆಗಳಂತೂ ಯುದ್ಧ ಪರಿಣಾಮಗಳನ್ನು ಇರಿಯುವ ಅಂಬುಗಳಂತೆ ನಮ್ಮೆದೆಗೆ ನುಗ್ಗುತ್ತವೆ. ಯುದ್ಧ ಮುಗಿದ ಮರುದಿನ ವೀರನೊಬ್ಬನ ಹೆಂಡತಿ ತನ್ನ ಗಂಡನ ಬರುವಿಗಾಗಿ ಕಾಯುವ ಯಾತನೆ ಇಲ್ಲಿದೆ. ವೀರರ ಕುದುರೆಗಳೆಲ್ಲ ಹಿಂದಿರುಗಿದವು. ಆದರೆ ವೀರನೊಬ್ಬನ ಕುದುರೆ ಹಿಂದಿರುಗುವುದಿಲ್ಲ. ಅವನ ಹೆಂಡತಿ ದುಃಖಿತಳಾಗಿ ಕುದುರೆ ಬಾರದ ಕಾರಣವನ್ನು ಹೀಗೆ ಹೇಳಿದಳು: 'ಬರಲಿಲ್ಲ ಕುದುರೆ ಬರಲಿಲ್ಲವೇ / ಊರೆಲ್ಲರ ಕುದುರೆ ಬಂದಾಯಿತಲ್ಲ / ಕುದುರೆ ಮುಡಿಯುಳ್ಳ ಮಗನನ್ನು ಹಡೆದ / ಒಡೆಯನ ಹೊರುವಂಥ ಕುದರ್‍ಯಾಕೆ ಬರಲಿಲ್ಲ / ನದಿಯೆರೆಡು ಕೂಡುವ ತಾಣದಲ್ಲಿ / ನಿಂತ ಹೆಮ್ಮರದ ಹಾಗೆ / ಉರುಳಿ ಬಿತ್ತೇನೋ ಅವನನ್ನು ಹೊತ್ತಂತ ಕುದುರೆ' ಕಾಲ ದೇಶಗಳನ್ನು ದಾಟಿ ಇಂದಿಗೂ ಪತಿಯ ಬರುವಿಗಾಗಿ ಕಾಯುತ್ತಿರುವ ಹೆಣ್ಣಿನ ಎದೆಯಲ್ಲಿ ನೋವಿನ ಒಲೆ ಉರಿಯುತ್ತಲೇ ಇದೆ.

ಇವೆಲ್ಲವೂ ಇಂದಿಗೂ ಯುದ್ಧಭೂಮಿಯಿಂದ ಹಿಂದಿರುಗದ ಮಗ ಅಥವಾ ಗಂಡನ ನಿರೀಕ್ಷೆಯಲ್ಲಿರುವ ತಾಯಂದಿರ ಒಡಲುರಿಯ ಮಾತುಗಳು. ಯುದ್ಧದ ಅನಾಹುತಗಳನ್ನೆಲ್ಲ ತಿಳಿದೂ ವಿವೇಕ ಪಡೆದ ಆಳರಸರನ್ನು ಭೂಮಿಯ ಮೇಲೆ ಕಾಣುವುದು ಸುಲಭವಲ್ಲ! ಸ್ವಾತಂತ್ರ್ಯವೆನ್ನುವುದೇ ನಿಜವಾದ ಸಾಮ್ರಾಜ್ಯ; ಸ್ವಾತಂತ್ರ್ಯಕ್ಕಿಂತ ಮಿಗಿಲಾದ ದೊರೆತನ ಭೂಮಿಯ ಮೇಲೆ ಇಲ್ಲವೆಂದು ಕುವೆಂಪು ಹೇಳುತ್ತಾರೆ.

■ **ಜಿ.ವಿ. ಆನಂದಮೂರ್ತಿ**

## ಮಾತೇ ಮುತ್ತು

- ಕೂರಬೇಡಿ, ನಿಲ್ಲಬೇಡಿ, ಇಳಿಯಬೇಡಿ, ಏರುತ್ತಾ ಇರಿ.

—ಮಾಸ್ತಿ ವೆಂಕಟೇಶ ಅಯ್ಯಂಗಾರ್

- ಯಾವುದೇ ಸಂಸ್ಕೃತಿ ತನ್ನ ವೈಶಿಷ್ಟ್ಯವನ್ನು ಉಳಿಸಿಕೊಳ್ಳದಿದ್ದರೆ ಅದು ಹೆಚ್ಚು ಕಾಲ ಉಳಿಯದು.

—ಮಹಾತ್ಮ ಗಾಂಧಿ

- ಪ್ರಾಣಿ ಜೀವನ ಮಿತವಾದದು, ಮನುಷ್ಯ ಜೀವನ ಬಹುಮುಖವಾದುದು.

—ಶಿವರಾಮ ಕಾರಂತ

- ಸರಳತನವು ಪರಿಪೂರ್ಣತೆಯ ಲಕ್ಷಣ.

—ಪಂಡಿತ ತಾರಾನಾಥ

- ಇವತ್ತಿನ ಹಾರೈಕೆ, ನಾಳಿನ ಪೂರೈಕೆ, ಇಂದಿನ ಕನಸು, ನಾಳೆಯ ನನಸು.

—ಕುವೆಂಪು

- ಒಳ್ಳೆಯದನ್ನು ನಿರ್ಣಯಿಸುವಾಗ ಮಾತು ಹೆಚ್ಚಾಗಲಿ. ಅಲ್ಲದ್ದನ್ನು ಕಂಡಾಗ ಮಾತು ಕೊಂಚಾಗಲಿ.

—ಬಿ.ಎಂ.ಶ್ರೀ